ದಿನಾಂಕ 12.08.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ.ಕೆ ಟಿ ಟಿ ವಕೀಲರಿಂದಃ

6. ಪ್ರತಿವಾದಿಯ ತಾಯಿ ಸ್ವತ್ತನ್ನು ಖರೀದಿ ಮಾಡುವಾಗ ಎಲ್ಲಾ ಕುಟುಂಬ ಸದ್ಯಸ್ಯರ ಸಹಿ ಪಡೆದುಕೊಂಡಿದ್ದೀರಿ ಎಂದರೇ ಸರಿ. ಕ್ರಯ ಪತ್ರವನ್ನು ಬರೆಸಿಕೊಂಡ ಸ್ವತ್ತು ದಿನಾಂಕ 21.11.2012 ರಲ್ಲಿ ಶಿವಮಾದಮ್ಮರವರಿಂದ ಕ್ರಯ ಕರಾರು ಆಗಿದೆ ಎಂದರೇ ಸರಿ. ನಿಡಿ-4 ಊರ್ಜಿತ ಆಗಿಲ್ಲ ಎಂದರೇ ಹೌದು. ನಿಪಿ-2 ರ ಸ್ವತ್ತುಗಳ ಮಾರಾಟದ ವ್ಯವಹಾರ ಯಾವಾಗ ಆಗಿದೆ ಎಂದರೇ ದಿ 04.12.2012 ರಲ್ಲಿ ಆಗಿದೆ. ದಿ 04.12.2012 ರಲ್ಲಿ ಪ್ರತಿವಾದಿ ನಿಡಿ-1ರಂತೆ ಕ್ರಯ ಕರಾರು ಮಾಡಿದ್ದಾರೆ ಎಂದರೇ ಹೌದು. ನಿಮ್ಮ ಪ್ರಮಾಣದಲ್ಲಿ ತಿಳಿಸಿರುವಂತೆ ಪ್ರತಿವಾದಿಗೆ ಹಣವನ್ನು ಕೊಟ್ಟು ಪ್ರತಿದಿನವೂ ಒಂದು ಕರಾರು ಪತ್ರವನ್ನು ಪ್ರತಿವಾದಿಯಿಂದ ಮಾಡಿಸಿಕೊಂಡಿದ್ದೀರಿ ಎಂದರೇ ಸಾಕ್ಷಿ ಎಲ್ಲಾ ಕಂತುಗಳಲ್ಲಿ ಹಣ ಕೊಟ್ಟಿರುವುದಕ್ಕೆ ಬರೆಸಿಕೊಂಡಿರುವುದಿಲ್ಲ. ಕೆಲವೊಂದಕ್ಕೆ ಬರೆಸಿಕೊಂಡಿದ್ದೇನೆ. ನಿಡಿ-4 ಕ್ಕೆ ಸಂಬಂಧಿಸಿದ ಹಣ ನಿಪಿ-2 ರಲ್ಲಿ ನಮೂದು ಆಗಿದೆ ಎಂದರೇ ಇಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿರುವ ರೂ.23 ಲಕ್ಷದ ವ್ಯವಹಾರ ನಿಡಿ-3ರಲ್ಲಿ ನಮೂದು ಆಗಿದೆ ಎಂದರೇ ಹೌದು.

7. ನಿಡಿ-1 ರಿಂದ 4 ದಿನಾಂಕ 25.07.2015 ರಲ್ಲಿ ರದ್ದಾಗಿದೆ ಎಂದರೇ ಹೌದು. ದಿ 25.07.2015 ರಂದು ಅಥವಾ ನಂತರ ದಾವಾ ಸ್ವತ್ತುಗಳ ವ್ಯಾಪಾರ ನಡೆದಿದೆಯಾ ಎಂದರೇ ಹೌದು. ಆ ದಿನ ನಡೆಯಿತು ಎಂಬ ವಿಚಾರವನ್ನು ನಿಪಿ-2ರಲ್ಲಿ ಬರೆದಿದ್ದಾರೆ ಎಂದರೇ ಸಾಕ್ಷಿ ಆ ದಿನಕ್ಕೆ ದಾವಾ ಸ್ವತ್ತುಗಳ ವ್ಯಾಪಾರದ ಬೆಲೆಗಳನ್ನು ನಿಗದಿ ಮಾಡಲಾಗಿತ್ತು ಎಂದು ಹೇಳುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತುಗಳ ವ್ಯಾಪಾರ ಯಾವಾಗ ನಡೆಯಿತು ಎಷ್ಟು ಮೊತ್ತಕ್ಕೆ ನಿಗದಿಪಡಿಸಲಾಗಿತ್ತು ಎಂದು ಬರೆದಿದ್ದೀರಿ ಎಂದರೇ ಹೌದು. ನಿಮ್ಮ ಪ್ರಕಾರ ದಿ 04.12.2012 ರಲ್ಲಿ ನಡೆದ ಕ್ರಯದ ವ್ಯವಹಾರ ದಿ 25.07.2015

ರಂದು ರದ್ದಾಗಿದೆ ಎಂದರೇ ಹೌದು. ಅದನ್ನು ಬಿಟ್ಟು ದಾವಾ ಸ್ವತ್ತುಗಳಿಗೆ ಸಂಬಂದ ಪಟ್ಟಂತೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೇ ಸುಳ್ಳು. ಅದು ಅಲ್ಲದೆ ಬೇರೆ ವ್ಯವಹಾರ ನಡೆದಿದೆ ಎನ್ನುವುದಾದರೆ ಅದನ್ನು ನಿಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿದ್ದೀರ ಎಂದರೇ ಇಲ್ಲ.

8. ದಿ 25.07.2015 ರಂದು ಕರಾರು ವ್ಯವಹಾರ ಆಗಿದೆ ಎಂದು ಹೇಳುವ ದಿನ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಎಂದರೇ ಹೌದು. ದಿ 25.07.2015 ರಲ್ಲಿ ಆದ ಕರಾರು ಪತ್ರದಲ್ಲಿ ಹಿಂದಿನ ವ್ಯವಹಾರದ ಬಗ್ಗೆ ನಮೂದಿಸಲು ತೊಂದರೆ ಇತ್ತ ಎಂದರೇ ಸಾಕ್ಷಿ ಹಣವನ್ನು ಪಡೆದುಕೊಂಡಿರುವುದರಿಂದ ಹಾಗೂ ಹಿಂದಿನ ಕರಾರು ರದ್ದಾಗಿರುವುದರಿಂದ ಅವುಗಳನ್ನು ನಮೂದು ಮಾಡಬೇಕು ಅನ್ನಿಸಲಿಲ್ಲ. ನಿಡಿ-1 ರಿಂದ 4 ರಲ್ಲಿ ನಮೂದು ಮಾಡಿರುವ ಸರ್ವೇ ನಂಬರುಗಳು ಪ್ರತೇಕವಾದ ಸರ್ವೇ ನಂಬರುಗಳು ಎಂದರೇ ಹೌದು. ಆ ಸರ್ವೇ ನಂಬರುಗಳು ಯಾವುದೇ ನಕ್ಷೆ ಅಥವಾ ಪೋಡಿ ಅವಶ್ಯಕತೆ ಇಲ್ಲ ಎಂದರೇ ನನಗೆ ಗೊತ್ತಿಲ್ಲ. ನಿಡಿ-1 ರಿಂದ 4 ರಲ್ಲಿ ತಿಳಿಸಿರುವ ಹಣ ನಿಡಿ-5 ಕ್ಕೆ ಹೊಂದಾಣಿಕೆ ಆಗಿದೆ ಎಂದರೇ ಇಲ್ಲ. ನೀವು ನಗದಾಗಿ ಪಾವತಿಸಿದ್ದೀರಿ ಎಂದು ಹೇಳುವ ಹಣ ಪ್ರತಿವಾದಿಗೆ ತಲುಪಿಲ್ಲ ಎಂದರೇ ಸುಳ್ಳು. ಪ್ರತಿವಾದಿಗೆ ಆ ದಿನ ಹಣ ಕೊಟ್ಟಿದ್ದೇವೆ ಎಂಬ ಬಗ್ಗೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರ ಎಂದರೇ ಇಲ್ಲ. ಆದರೆ ಕರಾರು ಪತ್ರ ಹಾಜರುಪಡಿಸಿದ್ದೇನೆ.

9. ನಿಪಿ-2 ರಲ್ಲಿ ನಮೂದಾಗಿರುವ ವ್ಯವಹಾರ ಯಾವುದು ನಡೆಯದೆ ಇರುವುದರಿಂದ ಹಾಗೂ ಹಣ ಪಾವತಿ ಆಗಾದ ಕಾರಣ ನಿಪಿ-2 ಊರ್ಜಿತ ಅಲ್ಲ ಎಂದರೇ ಸರಿಯಲ್ಲ. ನಿಪಿ-2 ರಲ್ಲಿ ಇಂತ ದಿನ ವ್ಯವಹಾರದ ಮಾತುಕತೆ ಆಗಿತ್ತು. ಆ ದಿನ ಮುಂಗಡ ಹಣವನ್ನು ನೀಡಿದೆ ಬಗ್ಗೆ ಯಾವುದೇ ಉಲ್ಲೇಖ ಇಲ್ಲ ಎಂದರೇ ಸುಳ್ಳು. ನಿಪಿ-2 ರ ಪ್ರಕಾರ ಯಾವುದೇ ಹಣವನ್ನು ಪಾವತಿ ಮಾಡದೆ ಇರುವುದರಿಂದ ಅದು ಕಾನೂನು ಬಾಹಿರ ದಾಖಲೆ ಎಂದರೇ ಸುಳ್ಳು. ನಿಡಿ-1 ರಿಂದ 3 ರಲ್ಲಿರುವ ಸ್ವತ್ತುಗಳಿಗೆ ಸಂಬಂದ ಪಟ್ಟಂತೆ ಕ್ರಯ ಪತ್ರ ಮಾಡಿಸಿಕೊಳ್ಳಲು ತೊಂದರೇ ಇತ್ತ ಎಂದರೇ ಹೌದು. ಏನು ತೊಂದರೆ ಇತ್ತು ಎಂದು ದಾವೆಯಲ್ಲಿ ತಿಳಿಸಿಲ್ಲ. ದಿ 04.12.2012 ರಲ್ಲಿ ಆಗಿದೆ ಎಂದು ಹೇಳುವ ವ್ಯವಹಾರ ಕಾಲ ಮಿತಿ ಇಲ್ಲ

ಎಂದರೇ ಸರಿಯಲ್ಲ. ಹೇಗಾದರೂ ಮಾಡಿ ಪ್ರತಿವಾದಿಯ ದಾವಾ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)